KACD310001462023

Presented on : 21.01.2023
Registered on : 21.01.2023
Decided on : 01.06.2026
Duration : 03 y/04 m/10days

# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹಿರಿಯೂರು.

ಉಪಸ್ಥಿತರುಃ– ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಹಿರಿಯೂರು.

**ಸಿ ಸಿ. ನಂಬರ್ 44/2023**

**ದಿನಾಂಕಃ 1 ನೇ ಜೂನ್ – 2026.**

ಪಿರ್ಯಾದಿ ಃ ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ
ಆರಕ್ಷಕರು, ಹಿರಿಯೂರು

(ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು)

**– ವಿರುದ್ಧ –**

ಆರೋಪಿತರು ಃ **ದೇವರಾಜ**
ಬಿನ್ ಲೇಟ್ ಹೊನ್ನಪ್ಪ, 39 ವರ್ಷ
ವಾಸಃ ಕೆ.ಆರ್ ಪುರ, (ಪುಟ್ಟಯ್ಯನ ಕಟ್ಟೆಗ್ರಾಮ),
ಹಿರಿಯೂರು ತಾಲ್ಲೂಕು.

(ಆರೋಪಿತರ ಪರವಾಗಿಃ ಶ್ರೀ ಕೆ.ಹೆಚ್.ಎ. ವಕೀಲರು)

[

ಆರೋಪಿಸಲ್ಪಟ್ಟ ಅಪಾದನೆ ಃ ಭಾ.ದ.ಸಂ ಕಲಂ 323, 324, 354(b), 504,506

ಆರೋಪದ ದಿನಾಂಕ ಃ 08.10.2022

SUJATHA SUVARNA B
Digitally signed by SUJATHA SUVARNA B
Date: 2026.06.06 13:50:19 +0530

| | | |
|---|---|---|
| ಆರೋಪ ದಾಖಲಾದ ದಿನಾಂಕ | ಃ | 08.10.2022 |
| ಸಾಕ್ಷ್ಯ ಪ್ರಾರಂಭದ ದಿನಾಂಕ | ಃ | 06.04.2026 |
| ಸಾಕ್ಷ್ಯ ಮುಕ್ತಾಯ ಗೊಂಡ ದಿನಾಂಕ | ಃ | 06.04.2026 |
| ತೀರ್ಪು ಘೋಷಿಸಿದ ದಿನಾಂಕ | ಃ | 01.06.2026 |
| ನ್ಯಾಯಾಧೀಶರ ನಿರ್ಣಯ | ಃ | ಅಂತಿಮ ಆದೇಶ |

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

## ತೀರ್ಪು

ಹಿರಿಯೂರು ಗ್ರಾಮಾಂತರ ಪೋಲೀಸ್ ಉಪನಿರೀಕ್ಷಕರು ಆರೋಪಿಯ ವಿರುದ್ಧ ಭಾ.ದ.ಸಂ ಕಲಂ 323, 324, 354(ಬಿ), 504, 506 ರಡಿಯಲ್ಲಿ ದಂಡಿಸಬಹುದಾದ ಕೃತ್ಯಗಳನ್ನು ಎಸಗಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನಾ ಪರ ಪ್ರಕರಣದ ಸಂಕ್ಷಿಪ್ತ ವಿವರಣೆ ಈ ಕೆಳಕಂಡಂತಿರುತ್ತವೆ.

ದಿನಾಂಕ 08.10.2022 ರಂದು ಬೆಳಿಗ್ಗೆ 8.30 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಪುಟ್ಟಯ್ಯನಕಟ್ಟೆ ಗ್ರಾಮದ ಜಗನ್ನಾಥ ರವರ ಅಂಗಡಿಯ ಮುಂದಿನ ಟಾರ್ ರಸ್ತೆಯಲ್ಲಿ ಆರೋಪಿತನು ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದ ಚಾಸಾ.3 ರವರಿಗೆ ಏನೋ ಸೂಳೆ ಮಗನೇ ಬೋಳಿ ಮಗನೇ ನಾನು ಕೆಲಸಕ್ಕೆ ಬಾರದೇ ಇದ್ದರೂ ನೀನು ಹೋಗಿದ್ದೀಯ ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು ಕಾಲುಗಳಿಂದ ಹೊಡೆದು ಕೊರಳು ಪಟ್ಟಿ ಹಿಡಿದುಕೊಂಡು ಎಳೆದುಕೊಂಡು ಹೋಗುತ್ತಿದ್ದು ಹಾಗೂ ಚಾಸಾ.1 ಮತ್ತು 2 ರವರು ಕೇಳಿದ್ದಕ್ಕೆ ಆರೋಪಿಯು ಚಾಸಾ.1 ಮತ್ತು ಫ್ರಾಸಾ.2 ರವರಿಗೆ ಸೂಳೆ ಮುಂಡೆರಾ, ಬೋಳಿಮುಂಡೇರಾ ನಾನು ಕೆಲಸಕ್ಕೇ

ಹೋಗದೇ ಇದ್ದರೆ ನಿನ್ನ ತಮ್ಮನೂ ಕೆಲಸಕ್ಕೆ ಹೋಗಬಾರದು ಎಂದು ಹೇಳಿದ್ದರೂ ಸಹ ನನ್ನನ್ನು ಬಿಟ್ಟು ಕೂಲಿ ಕೆಲಸಕ್ಕೆ ಏಕೆ ಹೋಗಿರುತ್ತಾನೆ ಎಂದು ಹೇಳಿ ಚಾಸಾ.3 ರವರಿಗೆ ಪುನಃ ಕೈಕಾಲುಗಳಿಂದ ಹೊಡೆದು ನೆಲಕ್ಕೆ ತಳ್ಳಿದ್ದು ಬಿಡಿಸಲು ಹೋದ ಚಾಸಾ.1 ರವರಿಗೆ ಕೈ ಕಾಲುಗಳಿಂದ ಹೊಡೆದು ಅವರು ತೊಟ್ಟಿದ್ದ ನೈಟಿಯನ್ನು ಹರಿದು ಹಾಕಿದ್ದಲ್ಲದೇ ಚಾಸಾ.2 ರವರಿಗೆ ಕಲ್ಲಿನಿಂದ ಹೊಡೆದು ಚಾಸಾ.1 ಮತ್ತು 2 ರವರಿಗೆ ಸಾಮಾನ್ಯ ಸ್ವರೂಪದ ಗಾಯನವನ್ನುಂಟು ಮಾಡಿರುತ್ತಾರೆ ಅಲ್ಲದೇ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ಪಿರ್ಯಾದಿದಾರರು ದೂರು ನೀಡಿದ್ದು ಸದರಿ ದೂರಿನ ಮೇರೆಗೆ ತನಿಖಾಧಿಕಾರಿಗಳು ತನಿಖೆ ಮಾಡಿ ಆರೋಪಿಗಳು ಭಾರತೀಯ ದಂಡ ಸಂಹಿತೆಯ ಕಲಂ.323, 324, 504, 506, 354(ಬಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ದೋಷಾರೋಪಣಾಪಟ್ಟಿ ಸಲ್ಲಿಸಲಾಗಿರುತ್ತದೆ.

3. ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯವು ಆರೋಪಿಯ ವಿರುದ್ಧ ಮೇಲ್ಕಂಡ ಕಲಂಗಳನ್ವಯ ಶಿಕ್ಷಾರ್ಹ ಕೃತ್ಯಗಳ ಬಗ್ಗೆ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿಯ ವಿರುದ್ಧ ಸಮನ್ಸ್ ಜಾರಿ ಮಾಡಿದಾಗ ಮೇಲ್ಕಂಡ ಆರೋಪಿಯು ಹಾಜರಾತಿಯನ್ನು ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ನಂತರ ಆರೋಪಿಗೆ ದೋಷಾರೋಪಣ ಪಟ್ಟಿ ಹಾಗೂ ಲಗತ್ತಿಸಿರುವ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ನೀಡಲಾಗಿದೆ. ಆರೋಪಿಯ ವಿರುದ್ಧ ಮೇಲ್ಕಂಡ ಕಲಂಗಳ ರೀತ್ಯಾ ದೋಷಾರೋಪಣೆಯನ್ನು ರಚಿಸಿ ಆರೋಪಿಗೆ ಓದಿ ಹೇಳಲಾಗಿ ಆರೋಪಿಯ ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ಕೇಳಿಕೊಂಡರು.

4. ಅಭಿಯೋಜನಾ ಪಕ್ಷದವರು ತಮ್ಮ ಈ ಪ್ರಕರಣದ ಸಮರ್ಥನೆಗಾಗಿ ಚಾಸಾ-1 ರಿಂದ ಚಾಸಾ.10 ರ ಪೈಕಿ ಪ್ರಾಸಾ.1 ರಿಂದ 3 ರವರ ಸಾಕ್ಷಿ ವಿಚಾರಣೆ ಮಾಡಿಕೊಂಡಿರುತ್ತಾರೆ

ಹಾಗೂ ನಿಪಿ.1 ರಿಂದ 4 ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯವರ ಪರ ಸಾಕ್ಷಿದಾರರ ಸಾಕ್ಷ್ಯದಲ್ಲಿ ಆರೋಪಿಯ ವಿರುದ್ಧ ಯಾವುದೇ ರೀತಿಯ ದಂಡನಾರ್ಹವಾದ ಸಾಕ್ಷ್ಯ ಒದಗಿಸದೇ ಇರುವುದರಿಂದ ದಂ.ಪ್ರ.ಸಂ. ಕಲಂ 313 ಅಡಿಯಲ್ಲಿ ಮಾಡಬೇಕಾಗಿದ್ದ ಆರೋಪಿಯ ಹೇಳಿಕೆಯನ್ನು ಕೈಬಿಡಲಾಗಿದೆ. ಆರೋಪಿಯ ಪರ ಯಾವುದೇ ಸಾಕ್ಷಿಯನ್ನು ವಿಚಾರಣೆ ಮಾಡಿಕೊಂಡಿರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

5. ಉಭಯ ಪಕ್ಷಕಾರರ ಪರ ಮಂಡಿಸಿದ ವಾದ ವಿವಾದಗಳನ್ನು ಅಲಿಸಲಾಗಿದೆ ಹಾಗೂ ಕಡತದಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿದೆ.

6. ಈ ಹಿನ್ನಲೆಯಲ್ಲಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೆ

1. ಅಭಿಯೋಜನೆಯು ದಿನಾಂಕ 08.10.2022 ರಂದು ಬೆಳಿಗ್ಗೆ 8.30 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಪುಟ್ಟಯ್ಯನಕಟ್ಟೆ ಗ್ರಾಮದ ಜಗನ್ನಾಥ ರವರ ಅಂಗಡಿಯ ಮುಂದಿನ ಟಾರ್ ರಸ್ತೆಯಲ್ಲಿ ಆರೋಪಿತನು ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದ ಚಾಸಾ.3 ರವರಿಗೆ ಏನೋ ಸೂಳೆ ಮಗನೇ ಬೋಳಿ ಮಗನೇ ನಾನು ಕೆಲಸಕ್ಕೆ ಬಾರದೇ ಇದ್ದರೂ ನೀನು ಹೋಗಿದ್ದೀಯ ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು ಮತ್ತು ಈ ಬಗ್ಗೆ ಚಾಸಾ.1 ಮತ್ತು 2 ರವರು ಕೇಳಿದ್ದು ಆರೋಪಿತನು ಚಾಸಾ.1 ಮತ್ತು 2 ರವರಿಗೆ ಸೂಳೆ ಮುಂಡೆರಾ, ಬೋಳಿಮುಂಡೇರಾ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿ ಶಾಂತಿ ಭಂಗವುಂಟುಮಾಡಿದ್ದು ಆ ಮೂಲಕ ಭಾ.ದಂ.ಸಂ ಕಲಂ.504 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?
2. ಅಭಿಯೋಜನೆಯು ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಚಾಸಾ.3 ರವರಿಗೆ ಕೈ ಕಾಲುಗಳಿಂದ ಹೊಡೆದು ಕೊರಳುಪಟ್ಟಿ ಹಿಡಿದುಕೊಂಡು ಎಳೆದುಕೊಂಡು ಹೋಗಿದ್ದು ಮತ್ತು ಚಾಸಾ.1 ಮತ್ತು 2 ರವರಿಗೆ ನಾನು ಕೆಲಸಕ್ಕೆ ಹೋಗದೇ ಇದ್ದರೆ ನಿನ್ನ

ತಮ್ಮನು ಕೆಲಸಕ್ಕೆ ಹೋಗಬಾರದು ಎಂದು ಹೇಳಿದ್ದರೂ ಸಹ ನನ್ನನ್ನು ಬಿಟ್ಟು ಕೂಲಿ ಕೆಲಸಕ್ಕೆ ಏಕೆ ಹೋಗಿರುತ್ತಾನೆ ಎಂದು ಹೇಳಿ ಚಾಸಾ.3 ರವರಿಗೆ ಪುನಃ ಕೈಕಾಲುಗಳಿಂದ ಹೊಡೆದು ನೆಲಕ್ಕೆ ತಳ್ಳಿದ್ದು ಬಿಡಿಸಲು ಹೋದ ಚಾಸಾ.1 ರವರಿಗೆ ಕೈ ಕಾಲುಗಳಿಂದ ಹೊಡೆದು ನೋವುಂಟುಪಡಿಸಿದ್ದು ಭಾ.ದಂ.ಸಂ.ಕಲಂ.323 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

3. ಅಭಿಯೋಜನೆಯು ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಚಾಸಾ.1 ರವರಿಗೆ ಕೈ ಕಾಲುಗಳಿಂದ ಹೊಡೆದು ಅವರ ತೊಟ್ಟಿದ್ದ ನೈಟಿಯನ್ನು ಹರಿದು ಹಾಕಿ ಆಕೆಯ ಚಾರಿತ್ರ್ಯ ವಧೆ ಮಾಡಿದ್ದು ಭಾ.ದಂ.ಸಂ.ಕಲಂ.354(ಬಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?
4. ಅಭಿಯೋಜನೆಯು ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಚಾಸಾ.2 ರವರಿಗೆ ಕಲ್ಲಿನಿಂದ ಹೊಡೆದು ನೋವುಂಟುಪಡಿಸಿದ್ದು ಆ ಮೂಲಕ ಭಾ.ದಂ.ಸಂ.ಕಲಂ.324 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?
5. ಅಭಿಯೊಾಜನೆಯು ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಚಾಸಾ.1 ಮತ್ತು 2 ರವರಿಗೆ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿದ್ದು ಭಾ.ದಂ.ಸಂ.ಕಲಂ.506 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾನೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?
6. ಆದೇಶ ಏನು ?

**7.** ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಿದ್ದೇನೆಃ–

ಅಂಶ ನಂ.**1** ರಿಂದ **5**ಃ ನಕಾರಾತ್ಮಕವಾಗಿ

**ಅಂಶ ನಂ.6** ಃ ಅಂತಿಮ ಆದೇಶದಂತೆ ಈ ಕೆಳಗೆ ಕಾಣಿಸಿರುವ

**ಕಾರಣಗಳುಃಃ**

**ಅಂಶ ನಂ.1 ರಿಂದ 5ಃ** ಸದರಿ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ವಿಷಯದ ಪುನರಾವರ್ತನೆಯನ್ನು ತಡೆಗಟ್ಟುವ ಉದ್ದೇಶದಿಂದ ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಂಡಿದೆ.

8. ಈ ಪ್ರಕರಣದಲ್ಲಿ ಅಭಿಯೋಜನೆಯು ರುಜುವಾತುಪಡಿಸಬೇಕಾಗಿರುವ ಅಂಶಗಳೆಂದರೆ, ದಿನಾಂಕ 08.10.2022 ರಂದು ಬೆಳಿಗ್ಗೆ 8.30 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಪುಟ್ಟಯ್ಯನಕಟ್ಟೆ ಗ್ರಾಮದ ಜಗನ್ನಾಥ ರವರ ಅಂಗಡಿಯ ಮುಂದಿನ ಟಾರ್ ರಸ್ತೆಯಲ್ಲಿ ಆರೋಪಿತನು ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದ ಚಾಸಾ.3 ರವರಿಗೆ "ಏನೋ ಸೂಳೆ ಮಗನೇ ಬೋಳಿ ಮಗನೇ ನಾನು ಕೆಲಸಕ್ಕೆ ಬಾರದೇ ಇದ್ದರೂ ನೀನು ಹೋಗಿದ್ದೀಯ" ಎಂದು ಹೇಳಿ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು ಕಾಲುಗಳಿಂದ ಹೊಡೆದು ಕೊರಳು ಪಟ್ಟಿ ಹಿಡಿದುಕೊಂಡು ಎಳೆದುಕೊಂಡು ಹೋಗುತ್ತಿದ್ದು ಹಾಗೂ ಚಾಸಾ.1 ಮತ್ತು 2 ರವರು ಕೇಳಿದ್ದಕ್ಕೆ ಆರೋಪಿಯು ಚಾಸಾ.1 ಮತ್ತು ಪ್ರಾಸಾ.2 ರವರಿಗೆ "ಸೂಳೆ ಮುಂಡೆರಾ, ಬೋಳಿಮುಂಡೇರಾ ನಾನು ಕೆಲಸಕ್ಕೇ ಹೋಗದೇ ಇದ್ದರೆ ನಿನ್ನ ತಮ್ಮನೂ ಕೆಲಸಕ್ಕೆ ಹೋಗಬಾರದು ಎಂದು ಹೇಳಿದ್ದರೂ ಸಹ ನನ್ನನ್ನು ಬಿಟ್ಟು ಕೂಲಿ ಕೆಲಸಕ್ಕೆ ಏಕೆ ಹೋಗಿರುತ್ತಾನೆ" ಎಂದು ಹೇಳಿ ಚಾಸಾ.3 ರವರಿಗೆ ಪುನಃ ಕೈಕಾಲುಗಳಿಂದ ಹೊಡೆದು ನೆಲಕ್ಕೆ ತಳ್ಳಿದ್ದು ಬಿಡಿಸಲು ಹೋದ ಚಾಸಾ.1 ರವರಿಗೆ ಕೈ ಕಾಲುಗಳಿಂದ ಹೊಡೆದು ಅವರು ತೊಟ್ಟಿದ್ದ ನೈಟಿಯನ್ನು ಹರಿದು ಹಾಕಿದ್ದಲ್ಲದೇ ಚಾಸಾ.2 ರವರಿಗೆ ಕಲ್ಲಿನಿಂದ ಹೊಡೆದು ಚಾಸಾ.1 ಮತ್ತು 2 ರವರಿಗೆ ಸಾಮಾನ್ಯ

ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ ಅಲ್ಲದೇ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಪುರಾವೆಗೊಳಿಸಬೇಕಾಗಿರುತ್ತದೆ.

**9.** ಅಭಿಯೋಜನೆಯವರು ಚಾಸಾ.1 ರವರನ್ನು ಪ್ರಾಸಾ.1 ಎಂದು, ಚಾಸಾ.2 ರವರನ್ನು ಪ್ರಾಸಾ.2 ಎಂದು ಹಾಗೂ ಚಾಸಾ.3 ರವರನ್ನು ಪ್ರಾಸಾ.3 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಚಾಸಾ.1 ರವರು ನೀಡಿದ ದೂರನ್ನು ನಿಪಿ.1 ಎಂದು, ಸ್ಥಳ ಮಹಜರನ್ನು ನಿಪಿ.2 ಎಂದು ನಿ.ಪಿ-1 ದೂರು, ನಿ.ಪಿ-1(ಎ) ಪ್ರಾಸಾ.1 ರವರ ಸಹಿ, ನಿ.ಪಿ-2 ಪಂಚನಾಮೆ, ನಿ.ಪಿ-2(ಎ) ಪ್ರಾಸಾ.1 ರವರ ಸಹಿ, ನಿ.ಪಿ-3 ಪ್ರಾಸಾ.2 ರವರ ಹೇಳಿಕೆ, ನಿ.ಪಿ- 4 ಪ್ರಾಸಾ.3 ರವರ ಹೇಳಿಕೆ ಗುರುತಿಸಿಕೊಂಡಿರುತ್ತಾರೆ.

**10.** ಪ್ರಾಸಾ.**1** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅವರಿಗೆ ಚಾಸಾ.**1** ರವರು ಅವರ ಅತ್ತೆ, ಚಾಸಾ.**3** ರಿಂದ **7** ರವರು ಹಾಗೂ ಆರೋಪಿಯು ಪರಿಚಯಸ್ಥರು, ಆರೋಪಿಯು ಅವರೊಂದಿಗೆ ಜಗಳ ಮಾಡಿಲ್ಲ, ಹೊಡೆದಿಲ್ಲ, ಬಡಿದಿಲ್ಲ, ಅವಾಚ್ಯ ಶಬ್ಧಗಳಿಂದ ಬೈದಿಲ್ಲ, ಬಟ್ಟೆ ಹಿಡಿದು ಎಳೆದಾಡಿಲ್ಲ, ಬೆದರಿಕೆ ಹಾಕಿಲ್ಲ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲವೆಂದು ಪೊಲೀಸರಿಗೆ ನಿಪಿ.1 ರಂತೆ ಯಾವುದೇ ದೂರನ್ನು ನೀಡಿರುವುದಿಲ್ಲವೆಂದು ನಿಪಿ 2 ಪಂಚನಾಮೆಯಲ್ಲಿರುವ ಸಹಿ 2(ಎ) ಅವರದೆಂದು ಆರೋಪಿತರು ಪ್ರಾಣ ಬೆದರಿಕೆ ಹಾಕಿಲ್ಲವೆಂದು ಮೂರು ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ದಾಖಲೆಗಳಿಗೆ ಸಹಿ ಮಾಡಿರುತ್ತಾರೆಂದು ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆದಿಲ್ಲವೆಂದು ಸಾಕ್ಷ್ಯನುಡಿದಿರುತ್ತಾರೆ.

**11.** ಪ್ರಾಸಾ.**2** ಮತ್ತು **3** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯು ಜೊತೆ ಜಗಳ ಮಾಡಿಲ್ಲ, ಹೊಡೆದಿಲ್ಲ ಬಡಿದಿಲ್ಲ, ಅವಾಚ್ಯ ಶಬ್ಧಗಳಿಂದ ಬೈದಿಲ್ಲ, ಚಾಸಾ.**1** ರವರ

ಬಟ್ಟೆ ಹಿಡಿದು ಎಳೆದಾಡಿಲ್ಲ ಬೆದರಿಕೆ ಹಾಕಿಲ್ಲ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಹಾಗೂ ಅವರು ಪೊಲೀಸರಿಗೆ ಹೇಳಿಕೆ ನೀಡಿಲ್ಲವೆಂದು ಸಾಕ್ಷ್ಯನುಡಿದಿರುತ್ತಾರೆ.

**12.** ಅಭಿಯೋಜನೆಯವರು ಫ್ರಾಸಾ.1 ರಿಂದ 3 ರವರು ಅಭಿಯೋಜನೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದಾರೆಂದು ಅವರನ್ನು ಪಾಟೀ ಸವಾಲು ಮಾಡಿದಾಗ್ಯೂ ಕೂಡ ಅಭಿಯೋಜನೆಗೆ ಪೂರಕವಾದ ಯಾವುದೇ ಸಾಕ್ಷ್ಯ ಹೊರಹೊಮ್ಮಿರುವುದಿಲ್ಲ ಮತ್ತು ಅವರು ದೋಷಾರೋಪಣೆಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

13. ಈ ಪ್ರಕರಣದಲ್ಲಿ ದೂರುದಾರ ಮತ್ತು ಗಾಯಾಳುಗಳಾದಂತಹ ಫ್ರಾಸಾ.1 ರಿಂದ 3 ರವರು ತಮಗಾದ ಗಾಯಗಳನ್ನು ಮತ್ತು ಘಟನೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಆದ್ದರಿಂದ ಉಳಿದ ಅಭಿಯೋಜನೆ ಪರ ಸಾಕ್ಷಿದಾರರ ಸಾಕ್ಷ್ಯವನ್ನು ಕೈಬಿಡಲಾಗಿದೆ. ಅಭಿಯೋಜನೆಯವರು ಫ್ರಾಸಾ.1 ರಿಂದ 3 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ್ಯೂ ಕೂಡ ಅಭಿಯೋಜನೆಗೆ ಪೂರಕವಾದ ಯಾವುದೇ ಅಂಶಗಳು ಫ್ರಾಸಾ.1 ರಿಂದ 3 ರವರ ಸಾಕ್ಷ್ಯದಲ್ಲಿ ಹೊರ ಬಂದಿರುವುದಿಲ್ಲ ಭಾರತೀಯ ಸಾಕ್ಷ್ಯ ಅಧಿನಿಯಮ 1872 ರ ಕಲಂ 154 ರ ಅಡಿಯಲ್ಲಿ ಫ್ರಾಸಾ.1 ರಿಂದ 3 ರವರ ಸಾಕ್ಷ್ಯವನ್ನು ವಿಶ್ಲೇಷಿಸಿದಾಗ ವಿರುದ್ಧ ಸಾಕ್ಷಿದಾರರು ಘಟನೆಗೆ ಸಂಬಂಧಿಸಿದಂತೆ ಏನನ್ನು ಹೇಳದಿರುವಾಗ ಉಳಿದ ಸಾಕ್ಷಿದಾರರ ಸಾಕ್ಷ್ಯವು ಉಪಯೋಗವಿಲ್ಲದ್ದು ಆಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ತೀರ್ಪುಜನ್ಯ **Kathi Odhabhai Bhimabhai V/s. State of Gujarath, AIR** 1993 **S.C** 1193 ಪ್ರಕರಣದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಆದ್ದರಿಂದ ಫ್ರಾಸಾ.1 ರಿಂದ 3 ರವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಯಾವುದೇ ರೀತಿಯಿಂದ ಉಪಯೋಗಕ್ಕೆ ಬಾರದಂತೆ ಇದೆ.

ಆದ್ದರಿಂದ ಇಂತಹ ಘಟನೆ ನಡೆದಿದೆ ಎಂಬುದನ್ನು ನಂಬುವಂತಿಲ್ಲ. ಈ ಎಲ್ಲಾ ಕಾರಣಗಳಿಂದ ಅಭಿಯೋಜನೆಯವರು ಆರೋಪಿಯ ವಿರುದ್ಧ ಹೊರಿಸಲಾದ ಆರೋಪವನ್ನು ಸಂಶಯಾತೀತವಾಗಿ ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತಾರೆಂದು ನಿರ್ಣಯಿಸಿ ಅಂಶ 1 ರಿಂದ 5 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**14.ಅಂಶ ನಂ.5 ಃ** ಮೇಲ್ಕಂಡ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

## ಆದೇಶ

ಆರೋಪಿಯ ಮೇಲಿನ ಆಪಾದನೆ ಸಾಬೀತಾಗಿರುವುದಿಲ್ಲ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತಯ ವಿರುದ್ಧ ಹೊರಿಸಲಾದ ಭಾರತೀಯ ನ್ಯಾಯ ಸಂಹಿತೆಯ ಕಲಂ. ಭಾ.ದ.ಸಂ ಕಲಂ 323, 324, 354(ಬಿ), 504, 506 ಸಹವಾಚಕ 34 ರಡಿಯಲ್ಲಿ ಎಸಗಿದ ಅಪರಾಧಗಳಿಂದ ದೋಷ ಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಪಿ.ಎಫ್.ನಂ.149/2022 ರಲ್ಲಿ ಅಮಾನತ್ತು ಪಡಿಸಿಕೊಂಡಿರುವ ಹಿಡಿ ಗಾತ್ರದ ಒಂದು ಕಲ್ಲು ಹಾಗೂ ನೇರಳೆ ಬಣ್ಣದ ಬಿಳಿ ಹೂವಿನ ಡಿಸೈನ್ ಇರುವ ಒಂದು ನೈಟಿ ಬೆಲೆ ರಹಿತ ವಸ್ತುವಾಗಿರುವುದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಗೊಳಿಸಲು ಆದೇಶಿಸಲಾಗಿದೆ.

ಈ ಪ್ರಕರಣದಲ್ಲಿ ಆರೋಪಿ ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ತೀರ್ಪು ಉದ್ಘೋಷಿಸಿದ ದಿನದಿಂದ 6 ತಿಂಗಳವರೆಗೆ

ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ , ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ದಿಃ 01.06.2026 ರಂದು ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

**ಅನುಬಂಧ**

**I ಪಿರ್ಯಾದುದಾರರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ-**

| | | |
|---|---|---|
| ಪ್ರಾಸಾ-1 | ಃ | ಯೋಗಮ್ಮ |
| ಪ್ರಾಸಾ-2 | ಃ | ರಂಗಮ್ಮ |
| ಪ್ರಾಸಾ-3 | ಃ | ರಾಘವೇಂದ್ರ |

**II ಪಿರ್ಯಾದುದಾರರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ-**

| | | |
|---|---|---|
| ನಿ.ಪಿ-1 | ಃ | ದೂರು |
| ನಿ.ಪಿ-1(ಎ) | ಃ | ಪ್ರಾಸಾ.1 ರವರ ಸಹಿ |
| ನಿ.ಪಿ-2 | ಃ | ಪಂಚನಾಮೆ |
| ನಿ.ಪಿ-2(ಎ) | ಃ | ಪ್ರಾಸಾ.1 ರವರ ಸಹಿ |
| ನಿ.ಪಿ-3 | ಃ | ಪ್ರಾಸಾ.2 ರವರ ಹೇಳಿಕೆ |
| ನಿ.ಪಿ-4 | ಃ | ಪ್ರಾಸಾ.3 ರವರ ಹೇಳಿಕೆ |

**III ಆರೋಪಿಯ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ-**

-ಇಲ್ಲಾ-

**IV ಆರೋಪಿಯ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ-**

–ಇಲ್ಲಾ–

**V ಅಭಿಯೋಜನೆಯ ಪರ ಮುದ್ದೆ ಮಾಲುಗಳು –**

–ಇಲ್ಲಾ–

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

Visit ecourts.gov.in for updates or download mobile app "eCourts Services" from Android or iOS

SUJATHA SUVARNA B

Digitally signed by SUJATHA SUVARNA B
Date: 2026.06.06 13:50:26 +0530